O.S.No.:122/2016
D.W.:1

ಈ ದಿನ ದಿ:24.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು:- ವಾದಿಗಳ ಪರ ವಕೀಲರಾದ ಶ್ರೀ ಎಸಿಸಿ ರವರಿಂದ:-</u>

1. ನಾನು ಎಸ್.ಎಸ್.ಎಲ್.ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು 1980 ರಿಂದ ಪೊಲೀಸ್ ಆಗಿ ಕೆಲಸ ಮಾಡಿದ್ದೆ. ನಾನು ಬೆಂಗಳೂರು ಸಿಟಿನಲ್ಲಿ ಪೊಲೀಸ್ ಆಗಿ ಕೆಲಸ ಮಾಡಿರುತ್ತೇನೆ. ಕೆಲಸದ ಸಮಯದಲ್ಲಿ ನಾನು ಬೆಂಗಳೂರಿನಲ್ಲಿಯೇ ವಾಸ ಇದ್ದೆ ಎಂದರೆ ಸರಿ. ನಾನು ಈಗಲೂ ಸಹ ಬೆಂಗಳೂರಿನಲ್ಲಿಯೇ ವಾಸವಿರುತ್ತೇನೆ ಎಂದರೆ ಸರಿ. ನಾನು ನಿವೃತ್ತಿ ಹೊಂದಿ 11ವರ್ಷ ಆಗಿರುತ್ತದೆ. ನಾನು ಕೆಲಸದಲ್ಲಿದ್ದಾಗ ವಾದಿಗಳ ವಿರುದ್ದ ನಾನಾಗಲೀ, ನನ್ನ ದೊಡ್ಡಪ್ಪನ ಮಗನಾದ ದ್ಯಾವಯ್ಯನಾಗಲೀ ಮತ್ತು ನನ್ನ ತಂದೆಯಾಗಲೀ ಯಾವುದೇ ಕೇಸು ಹೂಡಿರಲಿಲ್ಲ ಎಂದರೆ ಸರಿ. ನಾನು ನಿವೃತ್ತಿಯಾದ ನಂತರವೇ ನಾನು, ನನ್ನ ಚಿಕ್ಕಪ್ಪ ಮತ್ತು ನನ್ನ ತಂದೆಯವರು ದಾವಾಸ್ವತ್ತಿನ ಬಳಿ ಹೋಗಿರುತ್ತೇವೆ ಎಂದರೆ ಸರಿ.

2. ಈ ದಾವೆಯನ್ನು ಏತಕ್ಕಾಗಿ ಹೂಡಿರುತ್ತಾರೆ ಎನ್ನುವುದು ನಿಮಗೆ ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಪಹಣಿ ಅದಲುಬದಲು ಆಗಿರುತ್ತದೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ವಾದಿಗಳು ಜಮೀನು ಅದಲು-ಬದಲು ಆಗಿದೆ ಎಂದು ಹೂಡಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ, ವಾದಿಯ ತಂದೆ

ಮತ್ತು ನನ್ನ ದೊಡ್ಡಪ್ಪನಾದ ಕೆಂಚಪ್ಪ ರವರು ಧ್ಯಾವೇಗೌಡ ರವರ ಮಕ್ಕಳು ಎಂದರೆ ಸರಿ. ಧ್ಯಾವೇಗೌಡ ಮತ್ತು ಅವರ ಮಕ್ಕಳು ಎಷ್ಟು ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿದ್ದರು ಎಂಬ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಹುಟ್ಟುವುದಕ್ಕೂ ಮೊದಲೆ ಅವರು ವಿಭಾಗ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ನಾನು ಹುಟ್ಟುವುದಕ್ಕೂ ಮೊದಲೆ ಆಗಿರುವಂತಹ ಪತ್ರವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ವಾದಿಯ ತಂದೆ, ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನಾದ ಕೆಂಚಪ್ಪ ರವರು ನಾನು ಹುಟ್ಟುವುದಕ್ಕೂ ಮೊದಲು ಯಾವ ಯಾವ ಜಮೀನುಗಳನ್ನು ಖರೀದಿಸಿರುತ್ತಾರೆಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

3. ನಿಮ್ಮ ಸಹೋದರರ ಪರವಾಗಿಯು ಸಹ ಸಾಕ್ಷ್ಯ ನುಡಿಯಲು ಅವರು ನಿಮಗೆ ಯಾವುದಾದರೂ ಪತ್ರ ಬರೆದುಕೊಟ್ಟಿದ್ದಾರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಇತರೆ ಸಹೋದರರು ಬಂದು ಸಾಕ್ಷ್ಯ ನುಡಿದರೆ ಸತ್ಯಾಂಶ ಹೊರಗೆ ಬರುತ್ತದೆ ಎಂಬ ಕಾರಣಕ್ಕೆ ನಾನು ವಿದ್ಯಾವಂತನಾದ ಕಾರಣಕ್ಕೆ ಸುಳ್ಳು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

4. ನಿಮ್ಮ ತಂದೆಯವರು ಜಮೀನನ್ನು ಯಾವಾಗ ಖರೀದಿಸಿರುತ್ತಾರೆ

ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 1947ರಲ್ಲಿ ನಮ್ಮ ತಂದೆ ಮತ್ತು ನನ್ನ ದೊಡ್ಡಪ್ಪನಾದ ಕೆಂಚಪ್ಪ ರವರು ಸರ್ವೆ ನಂ.131ರ ಜಮೀನನ್ನು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಯಾವಾಗ ಖರೀದಿಸಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪತ್ರವನ್ನು ನಾನು ಓದಿರುತ್ತೇನೆ. ಸದರಿ ಪತ್ರದಲ್ಲಿ ಸರ್ವೆ ನಂ.131 ಎಂದು ಬರೆದಿರುತ್ತಾರೆ.

5. ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಸಿರುತ್ತೇನೆ. ಸಾಕ್ಷಿಯ ಪ್ರಮಾಣ ಪತ್ರದ 3ನೇ ಖಂಡಿಕೆಯಲ್ಲಿನ ಅಂಶಗಳನ್ನು ಅಂದರೆ ''ನಾನು ಮುಂದುವರೆದು ಹೇಳುವುದೇನೆಂದರೆ ನನ್ನ ತಂದೆಯಾದ 1ನೇ ಪ್ರತಿವಾದಿ ಮತ್ತು 2ನೇ ಪ್ರತಿವಾದಿಯ ತಂದೆಯಾದ ಲೇಟ್ ಕೆಂಚಪ್ಪ @ ಚಿಕ್ಕೇಗೌಡ.................ಅನುಭವದಾರರಾಗಿ ಇಂದಿಗೂ ಮುಂದುವರೆಯುತ್ತಿರುತ್ತೇವೆ" ಎಂದು ಬರೆಸಿರುವುದು ಸುಳ್ಳಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ಅದು ಸುಳ್ಳು ಎಂದು ಮೊದಲಿಗೆ ನುಡಿದು ನಂತರ ಮುಂದುವರೆದು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಖರೀದಿಸಿರುವುದು ಸರ್ವೆ ನಂ.18 ಎನ್ನುವುದು ಸರಿನಾ ಅಥವಾ ಸರ್ವೆ ನಂ.131 ಎನ್ನುವುದು ಸರಿನಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂ.131 ಎನ್ನುವುದು ಸರಿ ಎಂದು ನುಡಿಯುತ್ತಾರೆ.

6. ನಿಮ್ಮ ತಂದೆಯವರು ಮತ್ತು ನಿಮ್ಮ ದೊಡ್ಡಪ್ಪ ಜಮೀನನ್ನು ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಬೋರಯ್ಯ ಬಿನ್ ಲಿಂಗಯ್ಯ ರವರಿಂದ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಪತ್ರದ ಪ್ರಕಾರ ನಿಮ್ಮ ತಂದೆ ಮತ್ತು ದೊಡ್ಡಪ್ಪನವರು ಖರೀದಿ ಮಾಡಿರುವ ಜಮೀನಿನ ಚಕ್ಕುಬಂದಿ ನಿಮಗೆ ಹೇಳಲು ಆಗುತ್ತದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆ ಜಮೀನಿನ ಪೂರ್ವ ಮತ್ತು ಪಶ್ಚಿಮಕ್ಕೆ ಸರ್ಕಾರದ ಭೂಮಿ, ಉತ್ತರಕ್ಕೆ ಭೈರಯ್ಯನಿಗೆ ಆಗಿರುವ ಜಮೀನು ಮತ್ತು ದಕ್ಷಿಣಕ್ಕೆ ಕೆಂಪಯ್ಯನ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ನಿಡಿ-1ರ ಪ್ರಕಾರ ಆ ಜಮೀನಿನ ಉತ್ತರಕ್ಕೆ ಇದೇ ನಂಬರ್ ಪೈಕಿ ನಾನು ಕಣಿಜೋಗಿ ಮಗ ಭೈರನಿಂದ ಖರೀದಿ ಮಾಡಿದ ಜಮೀನು ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಇಲ್ಲ ಆ ಚಕ್ಕುಬಂದಿ ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-1ರ ಜಮೀನಿನ ಉತ್ತರಕ್ಕೆ ನಮೂದು ಮಾಡಿರುವ ಜಮೀನು ಬೋರಯ್ಯ ಬಿನ್ ಲಿಂಗಯ್ಯ ರವರಿಗೆ ಸೇರಿದ್ದು ಎಂದರೆ ಸಾಕ್ಷಿಯು ಹೌದು ಅವರು ಖರೀದಿಸಿದ್ದರು ಎಂದು ನುಡಿಯುತ್ತಾರೆ. ನಿಡಿ-1ರಲ್ಲಿ ಸರ್ವೆ ನಂ.131ರ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿಡಿ-1ರಲ್ಲಿ ಸರ್ವೆ ನಂ.18ರ ಬಗ್ಗೆ ಮಾತ್ರ ನಮೂದು ಇರುತ್ತದೆ ಎಂದರೆ ಸರಿ.

7. ಸರ್ವೆ ನಂ.18ರಲ್ಲಿ ಒಟ್ಟು ನೂರಾರು ಎಕರೆ ಜಮೀನು ಇರುತ್ತದೆ

ಎಂದರೆ ಸರಿ. ವಾದಿಗೆ ಸಂಬಂಧಿಸಿದ ಭೋಗ್ಯ ಪತ್ರದಲ್ಲಿ ಆಗಲೀ, ಖರೀದಿ ಪತ್ರದಲ್ಲಿ ಆಗಲೀ ನಮೂದಿಸಿರುವ ಚಕ್ಕುಬಂದಿಯಲ್ಲಿ ಅವರು ಯಾವುದೇ ಸರ್ವೆ ನಂಬರ್ ನ್ನು ಬರೆದಿಲ್ಲ, ಕೇವಲ ಹೆಸರುಗಳನ್ನು ಮಾತ್ರ ಚಕ್ಕುಬಂದಿಯಲ್ಲಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಹಾಗದರೆ ವಾದಿಗೆ ಸಂಬಂಧಿಸಿದ ಭೋಗ್ಯಪತ್ರ ಮತ್ತು ಕ್ರಯಪತ್ರದ ಯಾವ ದಿಕ್ಕಿನ ಚಕ್ಕುಬಂದಿಗೆ ಸರ್ವೆ ನಂಬರ್ ನ್ನು ಅವರು ತೋರಿಸಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಉತ್ತರದ ದಿಕ್ಕಿಗೆ ಸರ್ವೆ ನಂಬರ್ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ವಾದಿಯ ಯಾವುದೇ ಪತ್ರದಲ್ಲಿ ಉತ್ತರದ ದಿಕ್ಕಿಗೆ ಸರ್ವೆ ನಂಬರ್ ನ್ನು ತೋರಿಸಿಲ್ಲ ಎಂದರೆ ಸರಿಯಲ್ಲ.

8. ಸರ್ವೆ ನಂಬರ್ 18ರಲ್ಲಿ ಜೋಗಿ ರವರಿಗೆ 2ಎಕರೆ ಮತ್ತು ಭೈರ ರವರಿಗೆ 2ಎಕರೆ ಜಮೀನು ಸರ್ಕಾರದಿಂದ ಮಂಜೂರು ಆಗಿತ್ತು ಎಂದು ತೋರಿಸಲು ನೀವು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆ ರೀತಿಯ ಯಾವುದೇ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸದೆ ಇದ್ದರು ಹಾಜರುಪಡಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲೀ ನನ್ನ ತಂದೆಯವರು ಆಗಲೀ ಜೋಗಿ, ಭೈರಾ, ಕೆಂಪಿ, ಹುಚ್ಚಿಭೈರಾ ರವರಿಂದ ಯಾವುದೇ ಜಮೀನು ಖರೀದಿಸಿಲ್ಲ ಎಂದರೆ ಸರಿ.

9. ನಮಗೆ ಮತ್ತು ವಾದಿಗೆ ಸರ್ವೆ ನಂ.18ರಲ್ಲಿ ಕ್ರಯಪತ್ರವಾಗುವ ಕಾಲಕ್ಕೆ ಆ ಜಮೀನಿನಲ್ಲಿ ಯಾವುದೇ ಪೋಡಿಯಾಗಲೀ, ದುರಸ್ತಿಯಾಗಲೀ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಸರ್ವೆ ನಂ.130 ಮತ್ತು 131ರ ಖರ್ದಾ ದಾಖಲೆಗಳನ್ನು ನನ್ನ ಪೊಲೀಸ್ ಹುದ್ದೆಯ ಪ್ರಭಾವವನ್ನು ಬಳಸಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.18ರ ಜಮೀನು 1949ರ ಕಾಲಕ್ಕೆ ದುರಸ್ತಿ ಮತ್ತು ಪೋಡಿಯಾಗಿತ್ತು ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

10. ವಾದಿಗಳು ಆವಿದ್ಯಾವಂತರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು 5-6ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.18ರ ಜಮೀನು ಪೋಡಿಯಾಗದೇ ಇದ್ದರು ನಾನು ನನ್ನ ಅಧಿಕಾರವನ್ನ ಬಳಸಿಕೊಂಡು ಕೆಲವೊಂದು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.130ರ ಜಮೀನು ಮೊದಲಿಗೆ ಭೈರಾ ರವರ ಹೆಸರಿಗೆ ಮತ್ತು ನಂತರ ಆತನ ಹೆಂಡತಿಯಾದ ಹುಚ್ಚಿ ರವರ ಹೆಸರಿಗೆ ಮತ್ತು ಸರ್ವೆ ನಂ.131ರ ಜಮೀನು ಜೋಗಿ ರವರ ಹೆಸರಿಗೆ ನಂತರ ಅವರ ಹೆಂಡತಿಯಾದ ಕೆಂಪಿ ರವರ ಹೆಸರಿಗೆ ಇತ್ತು ಎಂದು

ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ನಿಡಿ-1ರ ಆಧಾರದ ಮೇಲೆ ನಿಮ್ಮ ಹೆಸರಿಗೆ ಸರ್ವೆ ನಂ.18ರಲ್ಲಿ ಆಗಲೀ, ಸರ್ವೆ ನಂ.131ಕ್ಕೆ ಸಂಬಂಧಿಸಿದಂತೆ ಆಗಲೀ ಯಾವತ್ತಾದರು ನಿಮ್ಮ ಹೆಸರಿಗೆ ಪಹಣಿ ಪತ್ರಿಕೆಗೆ ಬಂದಿದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂ.131ಕ್ಕೆ ಸಂಬಂಧಿಸಿದಂತೆ ಪಹಣಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಈ ರೀತಿ ಯಾವ ವರ್ಷದಲ್ಲಿ ನಿಮ್ಮ ಹೆಸರಿಗೆ ಸರ್ವೆ ನಂ.131ಕ್ಕೆ ಸಂಬಂಧಿಸಿದಂತೆ ಪಹಣಿ ಪತ್ರಿಕೆ ಬಂದಿರುತ್ತದೆ ಎಂದರೆ ಸಾಕ್ಷಿಯು ಸದರಿ ಪ್ರಶ್ನೆಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಸರ್ವೆ ನಂ.131ರ ಜಮೀನಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಯು ನಿಮ್ಮ ಹೆಸರಿಗೆ ಬಂದಿತ್ತು ಎಂದು ತೋರಿಸಲು ಆ ದಾಖಲೆಯನ್ನು ಹಾಜರುಪಡಿಸಲು ನಿಮಗೆ ತೊಂದರೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದಕ್ಕೆ ಉತ್ತರಿಸದೆ ಕೇವಲ ಸುಳ್ಳು ಎಂದು ನುಡಿಯುತ್ತಾರೆ. ಸರ್ವೆ ನಂ.18ರ ಪಹಣಿ ಪತ್ರಿಕೆ ಆಗಲೀ ಸರ್ವೆ ನಂ.131ರ ಪಹಣಿ ಪತ್ರಿಕೆಯಾಗಲೀ ನಮ್ಮ ಹೆಸರಿಗೆ ಯಾವತ್ತು ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವತ್ತು ಆ ಜಮೀನುಗಳಿಗೆ ಕಂದಾಯ ಕಟ್ಟಿಲ್ಲ ಮತ್ತು ಕಟ್ಟಿದ್ದೇನೆಂದು ತೋರಿಸಲು ದಾಖಲೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ನಮ್ಮ ಹಿರಿಯರು ಕಟ್ಟಿರುತ್ತಾರೆ, ದಾಖಲೆ ಅವರ ಬಳಿ ಇರುತ್ತವೆ ಎಂದು ನುಡಿಯುತ್ತಾರೆ.

12. ದಾವಾಸ್ವತ್ತಿಗೆ ಸಂಬಂಧಿಸಿದ ಖಾತೆ ಪಹಣಿಗಳು ವಾದಿಯ ತಂದೆಯ ಹೆಸರಿಗೆ ಬಂದಿತ್ತು, ಆ ಕಾರಣಕ್ಕೆ ಅವರು ಆ ಜಮೀನನ್ನು ಎಂ.ಸಿದ್ದಯ್ಯ ರವರಿಗೆ ಭೋಗ್ಯಕ್ಕೆ ಕೊಟ್ಟಿದ್ದರು ಎಂದರೆ ಸಾಕ್ಷಿಯು ಅವರು ಪಹಣಿಯನ್ನು ಚೇಂಜ್ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ಪಹಣಿಯ ಆಧಾರದ ಮೇಲೆ ಅವರು ಎಂ.ಸಿದ್ದಯ್ಯ ರವರಿಗೆ ಭೋಗ್ಯ ಪತ್ರ ಬರೆದುಕೊಟ್ಟಿದ್ದರು ಎಂದರೆ ಸಾಕ್ಷಿಯು ಪಹಣಿ ಪತ್ರಿಕೆಯ ಆಧಾರದ ಮೇಲೆ ಅಲ್ಲ ಖರೀದಿ ಪತ್ರದ ಆಧಾರದ ಮೇಲೆ ಬರೆದುಕೊಟ್ಟಿದ್ದರು ಎಂದು ನುಡಿಯುತ್ತಾರೆ. ಅಡಮಾನವಾದ ನಂತರ ಎಂ.ಸಿದ್ದಯ್ಯ ರವರ ಹೆಸರಿಗೆ ಸರ್ವೆ ನಂ.131ರ ಪಹಣಿ ಪತ್ರಿಕೆಯು ಸಹ ಬಂದಿತ್ತು ಎಂದರೆ ಸಾಕ್ಷಿಯು ಅವರು ಮಾಡಿಸಿಕೊಂಡಿದ್ದರು ಎಂದು ನುಡಿಯುತ್ತಾರೆ.

13. ನಮ್ಮ ತಂದೆಯವರು ಸರ್ವೆ ನಂ.18ರಲ್ಲಿ ಮಾತ್ರ ಜಮೀನು ಖರೀದಿಸಿರುತ್ತಾರೆ, ಸರ್ವೆ ನಂ.18ರಲ್ಲಿ ನೂರಾರು ಎಕರೆ ಜಮೀನು ಇರುವ ಕಾರಣಕ್ಕೆ ನಮ್ಮ ಜಮೀನು ಎಲ್ಲಿ ಬರುತ್ತದೆ ಎಂಬ ಬಗ್ಗೆ ನನಗೆ ಗೊತ್ತೆ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.131ರಲ್ಲಿ ನಾವು ಯಾವುದೇ ಜಮೀನು ಖರೀದಿಸದೆ ಇದ್ದರು ನಾನು ನಿವೃತ್ತಿ ಹೊಂದಿದ ನಂತರ ಕೆಲವೊಂದು ದಾಖಲೆಗಳನ್ನು ಸೃಷ್ಟಿಸಿಕೊಂಡು ಅದರ ಆಧಾರದ ಮೇಲೆ ದಾವಾಸ್ವತ್ತಿನ ಸ್ವಾಧೀನಾನುಭವಕ್ಕೆ ಸಂಬಂಧಿಸಿದಂತೆ ವಾದಿಗಳಿಗೆ ನಾವುಗಳು ತೊಂದರೆ

ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಆಲಿಸಿ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**